

# ಶ್ರೀ ಶೇಷಚಂದ್ರಿಕಾಚಾರ್ಯರು

## ಆರಾಧನ ದಿನ – ಆಷಾಢ ಶುದ್ಧ ಚತುರ್ಥಿ

ಸರ್ವಸರ್ವಂಸಹೇಶಾನಸ್ಸಭಾಸು ಜಿತವಾದಿರಾಟ್।
ಸರ್ವದಾ ಸರ್ವದೋ ಭೂಯಾದ್ರಘುನಾಥಮುನೀಶ್ವರ:॥

ಶ್ರೀ ಜಗನ್ನಾಥತೀರ್ಥರು "ಭಾಷ್ಯದೀಪಿಕಾ"ದಲ್ಲಿ ತಮ್ಮ ಗುರುಗಳನ್ನು ಹೀಗೆ ವರ್ಣಿಸಿದ್ದಾರೆ :

ಯೇನಾಯಂ ನಿರಣಾಯಿ ಮಧ್ವಗುರು ಸದ್ ಭಾಷ್ಯಪ್ರಕಾಶಾಶಯ:
ಪ್ರಾಖಂಡಿ ಪ್ರತಿವಾದಿದರ್ಶನಗಣ: ಪ್ರಾಬಂಧಿಗುರ್ವರ್ಣವ: ।
ಶಿಷ್ಯೇಭ್ಯ: ಸಮದಾಯಿ ವಿತ್ತಮುಭಯಂ ಪ್ರಾಲಂಭಿವಿದ್ಯಾಸನಂ
ಸೋಯಂ ಶ್ರೀರಘುನಾಥಯತಿರಾಟ್ ಶುದ್ಧಿಂ ವಿದಧ್ಯಾನ್ಮತೇ: ॥

ಆಶ್ರಮ ನಾಮ – ಶ್ರೀ ರಘುನಾಥತೀರ್ಥರು

ಕಾಲ – 1641-1755

ಜನ್ಮಸ್ಥಳ – ಗುಡಿಬಂಡೆ, ಕೋಲಾರ ಜಿಲ್ಲೆ

ಆಶ್ರಮಕಾಲ 1700-1755 (55 ವರ್ಷ)

ವೃಂದಾವನ – ತಿರುಮಕೂಡಲು (ತ್ರಿಮಕೂಟ ಕ್ಷೇತ್ರ)

ವ್ಯಾಸರಾಜರ ನಂತರ 10ನೇ ಯತಿಗಳು

ಆಶ್ರಮ ಗುರುಗಳು– ಶ್ರೀಲಕ್ಷ್ಮೀನಾರಾಯಣತೀರ್ಥರು

**ಆಶ್ರಮ ಶಿಷ್ಯರು–**

**ಶ್ರೀ ಲಕ್ಷ್ಮೀನಿಧಿತೀರ್ಥರು** –

ಇವರು ಕಿರಿಯಪಟ್ಟದಲ್ಲೇ ವೃಂದಾವನಸ್ಥರಾಗಿದ್ದಾರೆ

**ಶ್ರೀಜಗನ್ನಾಥತೀರ್ಥರು (ಭಾಷ್ಯದೀಪಿಕಾಚಾರ್ಯರು)**

**ಗ್ರಂಥಗಳು –**

**೧. ಶೇಷತಾತ್ಪರ್ಯಚಂದ್ರಿಕಾ**

**(ಚಂದ್ರಿಕಾ ಗ್ರಂಥದ ಕೊನೆ ೨ ಭಾಗಕ್ಕೆ ವ್ಯಾಖ್ಯಾನ)**

**೨. ತಂತ್ರಸಾರಸಂಗ್ರಹ ವ್ಯಾಖ್ಯಾನ (ತತ್ತ್ವಕರ್ಣಿಕಾ)**

**೩. ಬೃಹತೀಸಹಸ್ರ ವ್ಯಾಖ್ಯಾನ (ತತ್ತ್ವಸಾರ)**

**೪. ಪದಾರ್ಥ ವಿವೇಕ**

**೫. ಕರ್ಮ ನಿರ್ಣಯ ವ್ಯಾಖ್ಯಾನ**

**೬. ಈಶಾವಾಸ್ಯೋಪನಿಷದ್ ಭಾಷ್ಯ ಟೀಕಾ ವ್ಯಾಖ್ಯಾನ**

**೭. ಗಂಗಾಸ್ತೋತ್ರ**

## ರಘುನಾಥತೀರ್ಥರು ಶೇಷಚಂದ್ರಿಕಾಚಾರ್ಯರಾದರು –

ಶ್ರೀವ್ಯಾಸರಾಜರನ್ನು ತಮ್ಮ ಶಿಷ್ಯರು "ಚಂದ್ರಿಕಾ ಗ್ರಂಥದ ಕಡೇ 2 ಭಾಗಗಳಿಗೆ ವ್ಯಾಖ್ಯಾನವನ್ನು ಯಾರು ಮಾಡುತ್ತಾರೆ" ಎಂದು ಪ್ರಶ್ನಿಸಲು, ಶ್ರೀವ್ಯಾಸರಾಜರು ತಮ್ಮ ಶಿಷ್ಯರಿಗೆ ಹೇಳಿದ್ದರು "ದಶಮೋ ಮತ್ಸಮೋ ಭವೇತ್" ಎಂದು. ಅಂದರೆ ಶ್ರೀವ್ಯಾಸ ರಾಜರಿಂದ ಹತ್ತನೇಯವರು ಶ್ರೀವ್ಯಾಸರಾಜರಿಗೆ ಸಮ–ರಾಗುತ್ತಾರೆಂದು ಹೇಳಿದ್ದರು. ಅವರಿಗೆ ಹತ್ತನೇಯವರೆಂದರೆ ಶ್ರೀರಘುನಾಥತೀರ್ಥರೇ. ವ್ಯಾಸರಾಜರು ಉಳಿಸಿದ್ದ ಕಡೆ ಎರಡು ಭಾಗಗಳಿಗೆ ವ್ಯಾಖ್ಯಾನವನ್ನು ಬರೆದದ್ದರಿಂದಲೇ ಅವರನ್ನು ಶೇಷ ಚಂದ್ರಿಕಾಚಾರ್ಯರೆಂದು ಕರೆಯುತ್ತಾರೆ. ಈಗಲೂ ಶ್ರೀಗಳನ್ನು ರಘುನಾಥತೀರ್ಥರೆಂದರೆ ಅನೇಕರಿಗೆ ತಿಳಿಯುವುದೇ ಇಲ್ಲ. "ಶೇಷಚಂದ್ರಿಕಾಚಾರ್ಯ" ಎಂದೇ ಹೆಸರಾಗಿದ್ದರು.

## ಹೈದರಾಲಿಯ ಪ್ರಣಾಮಗಳು –

ಒಮ್ಮೆ ಹೈದರಾಲಿಗೆ ಕೆಲವು ಕುಹಕಿಗಳು ಬಂದು ಅಲ್ಲಿದ್ದ ಶ್ರೀ ಶೇಷಚಂದ್ರಿಕಾಚಾರ್ಯರ ವೃಂದಾವನವನ್ನು ಬೇರೆಡೆಗೆ ಸಾಗಿಸಲು ಪ್ರಾರ್ಥಿಸಿದಾಗ, ಹೈದರಾಲಿಯು ಅಲ್ಲಿನ ತಹಶೀಲ್ದಾರರನ್ನು ಕರೆಸಿ ಆ ವೃಂದಾವನವನ್ನು ಬೇರೆಡೆಗೆ ಸ್ಥಳಾಂತರಿಸಲು ಆಜ್ಞಾಪಿಸಿದನು. ಆದರೆ ಆ ತಹಸೀಲ್ದಾರನು ಶ್ರೀ ಶೇಷಚಂದ್ರಿಕಾಚಾರ್ಯರ ಮಹಿಮೆ ಯನ್ನು ಅರಿತಿದ್ದರಿಂದ ಒಂದೆರಡು ದಿನ ತಡ ಮಾಡಿದನು. ಅಷ್ಟರಲ್ಲಿ ಹೈದರಾಲಿಗೆ ಒಂದು ದಿನ ರಾತ್ರಿ ಒಂದು ಕನಸು ಬಿತ್ತು. ಅದರಲ್ಲಿ "ಹೈದರಾಲಿಯ ಮಗ ಐದು ವರ್ಷದ ಟಿಪ್ಪೂಸುಲ್ತಾನನು ನದೀ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದನು. ಆಗ ಹೈದರಾಲಿಯು

ಸಹಾಯಕ್ಕಾಗಿ ಯಾಚಿಸಿದಾಗ ಅಲ್ಲೇ ದಡದಲ್ಲಿದ್ದ ಶ್ರೀ ಒಬ್ಬ ವೃದ್ಧ ಯತಿಗಳು ಬಂದು ಟಿಪ್ಪು ಸುಲ್ತಾನನನ್ನು ರಕ್ಷಿಸಿ, ದಡಕ್ಕೆ ತಂದು ಬಿಟ್ಟಾಗ, ಸಂತಸಗೊಂಡ ರಾಜನು ತಮಗೆ ನನ್ನಿಂದ ಏನಾಗ-ಬೇಕೆಂದು ಕೇಳಲು ಆ ಯತಿಗಳು ಏನನ್ನೂ ಹೇಳದೆ ಅಲ್ಲೇ ಸಮೀಪದಲ್ಲಿದ್ದ ಒಂದು ವೃಂದಾವನದ ಒಳಗೆ ಪ್ರವೇಶಿಸಿದರು". ಅಷ್ಟರಲ್ಲಿ ರಾಜನಿಗೆ ಎಚ್ಚರವಾಯಿತು.

ಮಾರನೇ ದಿನ ಬೆಳಿಗೆ ರಾಜನು ತನ್ನ ಮುಖ್ಯಮಂತ್ರಿಗಳಾದ ಶ್ರೀ ಪೂರ್ಣಯ್ಯನವರನ್ನು ಕರೆಸಿ, ಅವರಿಗೆ ತನಗಾದ ಕನಸಿನ ಅರ್ಥ ವೇನೆಂದು ಪ್ರಶ್ನಿಸಲು, ಶೇಷಚಂದ್ರಿಕಾಚಾರ್ಯರ ಪ್ರಭಾವವನ್ನು ಅರಿತಿದ್ದ ಶ್ರೀ ಪೂರ್ಣಯ್ಯನವರು ರಾಜನಿಗೆ ಹೇಳಿದರು, "ನೀನು ಯತಿಗಳ ವೃಂದಾವನವನ್ನು ಸ್ಥಳಾಂತರಿಸಲು ಆಜ್ಞೆ ನೀಡಿರುವೆ ಯಲ್ಲ, ಆ ಯತಿಗಳೇ ನಿನ್ನ ಮಗನನ್ನು ನಿನ್ನ ಕನಸಿನಲ್ಲಿ ಕಾಪಾಡಿದ್ದು. ನೀನು ಅವರ ವೃಂದಾವನವನ್ನು ಸ್ಥಳಾಂತರಿಸಬೇಡ" ಎನ್ನಲು, ರಾಜನು ಸಂತೋಷಗೊಂಡು ಅಲ್ಲಿನ ವೃಂದಾವನಕ್ಕೆ ತಾನೇ ಎದುರು ನಿಂತು, ಕಲ್ಲಿನ ಕಟ್ಟಡವನ್ನು ಕಟ್ಟಿಸಿಕೊಟ್ಟನು ಮತ್ತು ಪ್ರತಿದಿನದ ಪೂಜಾ ಕಾರ್ಯಕ್ಕಾಗಿ ಸಕಲ ಸವಲತ್ತುಗಳನ್ನು ಏರ್ಪಡಿಸಿದನು. ರಾಜನು ಪ್ರತಿದಿನ ಶ್ರೀರಂಗಪಟ್ಟಣದ ರಂಗನಾಥ ನನ್ನು ದರ್ಶನದ ಜೊತೆಗೇ, ಆಗಾಗ ಶೇಷಚಂದ್ರಿಕಾಚಾರ್ಯರ ವೃಂದಾವನವನ್ನೂ ದರ್ಶನ ಮಾಡುತ್ತಿದ್ದನು. ಮುಸ್ಲಿಮ್ ರಾಜ ನಾದರೂ ನಮ್ಮ ಶೇಷಚಂದ್ರಿಕಾ ಚಾರ್ಯರ ಬಗ್ಗೆ ವಿಶೇಷ ಗೌರವವನ್ನು ಹೊಂದಿದ್ದನು.

## ಶ್ರೀ ಜಗನ್ನಾಥತೀರ್ಥರಿಗೆ "ಭಾಷ್ಯದೀಪಿಕಾಚಾರ್ಯ" ಬಿರುದು ಪ್ರಧಾನ–

ತಮ್ಮ ಶಿಷ್ಯರಾದ ಶ್ರೀ ಜಗನ್ನಾಥತೀರ್ಥರು ಒಮ್ಮೆ ತುರುಷ್ಕರ ಹಾವಳಿಯಿಂದ, ದೇವರ ವಿಗ್ರಹಗಳನ್ನೂ, ಆಭರಣಗಳನ್ನೂ ಅವರು ಕೊಂಡೊಯ್ಯಲು ಬಂದಾಗ, ಅವರಿಂದ ತಪ್ಪಿಸಿಕೊಳ್ಳಲು, ದೇವರ ಪೆಟ್ಟಿಗೆಯನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡು ಕಾವೇರಿ ನದಿಯನ್ನು ದಾಟಿಕೊಂಡು ಹೋದಾಗ ಶಸ್ತ್ರಾಘಾತವಾಯಿತು. ಆದ್ದರಿಂದ ಗೋಪಾಲಕೃಷ್ಣನ ಪೂಜೆಯನ್ನು ತಮ್ಮ ಗುರುಗಳಿಗೇ ಒಪ್ಪಿಸಿ, ತಾವು ಕೇವಲ ಶಾಸ್ತ್ರ ಪ್ರವಚನಾದಿಗಳ ಮೂಲಕ ಜ್ಞಾನ ಮಾರ್ಗವೇ ಸೂಕ್ತವೆಂದು, ಗ್ರಂಥರಚನೆಯಲ್ಲಿ ತೊಡಗಿಸಿಕೊಂಡರು. ಒಮ್ಮೆ ಭಾಷ್ಯದೀಪಿಕಾ ಗ್ರಂಥವನ್ನು ಬರೆಯುತ್ತಿರಲು ತಮಗೇ ಅರಿವಿಲ್ಲದೇ ನಿದ್ರಾಗ್ರಸ್ಥರಾದರು. ಹಿಡಿದ ಲೇಖನಿ ಕೈಯಲ್ಲೇ ಇತ್ತು, ದೀಪದ ಹಣತೆ ಉರಿಯುತ್ತಲೇ ಇತ್ತು. ಇದನ್ನು ನೋಡಿದ ಗುರುಗಳು ಆ ತಾಳಪತ್ರೆಗಳನ್ನು ಜೋಡಿಸಿಕೊಂಡು ಓದಿದರು, ಗ್ರಂಥಶೈಲಿಯನ್ನು ಕಂಡು ಬಹಳ ಸಂತಸಗೊಂಡರು ಮತ್ತು ಶಿಷ್ಯನಿಗೆ ಹೇಳಿದರು "ಇಂಥಹ ಗ್ರಂಥವನ್ನು ರಚಿಸಿದ ನೀವು ಭಾಗ್ಯಶಾಲಿಗಳು ನಿಮ್ಮಂತವರಿಗೆ ಶಸ್ತ್ರಾಘಾತದ ನಿಮಿತ್ತ ದೋಷವೆಲ್ಲಿಹುದು. ಇನ್ನು ಮುಂದೆ ಗೋಪಾಲಕೃಷ್ಣನ ಪೂಜೆಯನ್ನು ನೀವೂ ಮಾಡತಕ್ಕದ್ದು" ಎಂದು ಹೇಳಿ, ಶಿಷ್ಯನಿಗೆ "ಭಾಷ್ಯದೀಪಿಕಾಚಾರ್ಯ" ಎಂಬ ಬಿರುದನ್ನು ಪ್ರಧಾನ ಮಾಡಿದರು.

## ರಾಗ – ಶ್ರೀರಾಗ ಆದಿತಾಳ

ಪ್ರಾರ್ಥಿಸುವೆ । ರಘುನಾಥತೀರ್ಥರ ।
ಪ್ರಾರ್ಥಿಸುವೆ । ಪುರುಷಾರ್ಥಪ್ರದರ । ಪ ।
ಸಾರ್ಥಕವಾಗಲು ಪಾರ್ಥಿವದೇಹವು ।
ಪಾರ್ಥಸಖನೆ ಸರ್ವೋತ್ತಮನೆಂದು
ಸಮರ್ಥಿಸಿ ಜಗದಲಿ ಕೀರ್ತಿ ಗಳಿಸಿದವರ ॥ ಅ.ಪ ॥
'ನೇದೃಶಂ ಸ್ಥಲಮಲಂ ಶಮಲಘ್ನಂ'
'ನಾಸ್ಯತೀರ್ಥ ಸಲಿಲಸ್ಯ ಸಮಂ ವಾ: ।
ನಾಸ್ತಿ ವಿಷ್ಣು ಸದೃಶಂ ನನುದೈವಂ'
ಸತ್ಯವಚನಗಳಿವೆಂದು ಸೂಚಿಸುತ ।
ಆಸ್ತಿಕ ಜನಮನ ರಂಜಕ ತ್ರಿಮಕುಟ
ಕ್ಷೇತ್ರನಿವಾಸ ಪವಿತ್ರತಮ ಚರಿತರ ॥ ೧ ॥
ವ್ಯಾಸರಾಜ ಗುರುವರ್ಯ ರಚಿತ ತಾ–
ತ್ಪರ್ಯಚಂದ್ರಿಕಾ ಗ್ರಂಥವನು ।
ವಾಸುದೇವ ನರಹರ್ಯನುಗ್ರಹದಿ
ಉರ್ವರಿತವ ವಿರಚಿಸಿ ಮೆರೆದ ।
ಶೇಷಚಂದ್ರಿಕಾಚಾರ್ಯರೆಂಬೋ ಗುರು
ವ್ಯಾಸರಾಜರಪರಾವತಾರರ ॥ ೨ ॥
ರಾಗದ್ವೇಷಗಳ ತೊರೆಯುತ ತನ್ನನು–
ರಾಗದಿಂದ ಭಜಿಸುವ ಜನಕೆ ।
ಭೂಗಕಲ್ಪತರುವಂತೆ ಅರಿಷ್ಟವ ನೀಗಿ
ಸಾಧುಭೋಗಗಳೀವ ।
ಯೋಗಿಜನ ಮನೋನಯನ ಪ್ರಸನ್ನ ಶ್ರೀ
ರಾಘವೇಂದ್ರರಪರಾವತಾರರ ॥ ೩ ॥

ರಾಗ – ಕಮಾಚ್ – ಏಕತಾಳ

ವೇದಾಂತ ಸಾಮ್ರಾಜ್ಯ ರಾಜಾಧಿರಾಜ ।
ತೇಜೋಮಯರ ಪಾದಾಬ್ಜವೇ ಶರಣ । ಪ ।
ರಾಜಾಧಿರಾಜ ಕರಾರ್ಚಿತ ಚರಣ ।
ಪ್ರಾಜ್ಯಪ್ರಜ್ಞರ ಶುದ್ಧಕುಲದಿವ್ಯಾಭರಣ । ಅ.ಪ ।
ಭ್ರಾಂತಿಗೆ ನಿಧನ ಸುಖಶಾಂತಿಗೆ ಸದನ ವೇ ।
ದಾಂತಿಯ ಮಾನಸ ಕಾಂತಿಗೆ ಸಾಧನ । ೧ ।
ಇಂದಿರಾಪತಿಯ ಆನಂದಾದಿ ಸದ್ಗುಣ ।
ವೃಂದ ತೋರಿದ ಶೇಷಚಂದ್ರಿಕಾಚಾರ್ಯ । ೨ ।
ಹಿರಿದು ನಿಮ್ಮಯ ವ್ಯಾಪ್ತಿ ಕಿರಿದು ಎಮ್ಮಯ ಶಕ್ತಿ ।
ಪರಮ ಪ್ರಸನ್ನ ಶ್ರೀಗುರುಸಾರ್ವಭೌಮ । ೩ ।

## ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆ –

ಶೇಷಚಂದ್ರಿಕಾ ಆರ್ಯರೇ ಶರಣು ಶೇಷಚಂದ್ರಿಕಾ
ಶೇಷಶಾಯಿ ನಿರ್ದೋಷ ಗುಣಾಂಬುಧಿ ಶ್ರೀಶಗೆ । ಪ ।
ಪ್ರಿಯ ರಘುನಾಥ ಯತೀಂದ್ರ–
ಇಂದಿರಾ ಸಹ ಹಂಸ ಬೋಧಿತ
ಮಂದಜಭವ ಸನಕಾದ್ಯರ ವಂಶಜಾ
ನಂದ ಮುನೀಂದ ಪರಂಪರ ಲಕ್ಷ್ಮೀ
ನಾರಾಯಣ ಯೋಗೀಂದ್ರ ಸಂಜಾತ ಶೇಷಚಂದ್ರಿಕಾರ್ಯರೇ।೧।
ಭೈಷ್ಮಿ ಮೈಥಿಲಿ ಈಶ ಶ್ರೀಕೃಷ್ಣರಾಮನ್ನ
ತೋಷಿಸಿ ತಂತ್ರ ಸುಸಾರದಿ ಅರ್ಚಿಸಿ

ಭಾಷ್ಯ ದೀಪಿಕಾರ್ಯ ತತ್ ಶಿಷ್ಯ ಜಗನ್ನಾಥ
ಯತಿ ಸಂಸೇವಿತ ಕಾವೇರಿ ನರ–
ಸಿಂಹ ಕ್ಷೇತ್ರದಿ ಇಪ್ಪ ಶೇಷಚಂದ್ರಿಕಾ ಆರ್ಯರೇ ಶರಣು । ೨ ।
ಬಂಧು ಭಯದಿಂದ ಹೊರನಿಂದೆ ಮಂದನ್ನ
ದಯದಿಂದ ಒಳಕರತಂದು ಸದನುಸಂಧಾನ
ಒದಗಿಸಿ ಅರವಿಂದಜ ತಾತ
"ಪ್ರಸನ್ನ ಶ್ರೀನಿವಾಸ" ಪ್ರಿಯಕರ ನರಾಂಶ
ಸಂಯುತ ಗುರುವರ ಮಹಂತ ಶರಣು । ೩ ।



**Collection by : Narahari Sumadhwa**
email : Naraharisumadhwa@yahoo.in
www.sumadhwaseva.com

**Source :**
**Dr BNK Sharma,**
**Dr Vyasanakere Prabhanjanacharya,**
**Tatvavada and other articles**